## ಸೂಕ್ತಿಪ್ರಭ

⇨ **ನ**ಮ್ಮ ಸಂಘವಿರುವುದು ಅನಾಥರಿಗೆ, ದೀನರಿಗೆ, ನಿರಕ್ಷರಸ್ಥರಾದ ಬೇಸಾಯಗಾರರಿಗೆ ಮತ್ತು ಕೂಲಿಕಾರರಿಗೆ. ಮೊದಲು ಅವರಿಗೆ ಎಲ್ಲವನ್ನೂ ಮಾಡಿ ಆದಮೇಲೆ ಕಾಲ ಸಿಕ್ಕಿದರೆ ನಂತರ ಮೇಲುವರ್ಗದವರಿಗೆ. ರೈತರು ಮತ್ತು ಕೂಲಿಯವರನ್ನು ಪ್ರೀತಿಯಿಂದ ಜಯಿಸಬೇಕು. ಅನಂತರ ಸ್ವಲ್ಪ ಹಣವನ್ನು ಚಂದಾ ಎತ್ತಿ ತಮ್ಮ ಹಳ್ಳಿಯಲ್ಲೇ ಅವರು ಸಮಿತಿಯನ್ನು ಸ್ಥಾಪಿಸುವಂತೆ ಮಾಡಿ. ಕ್ರಮೇಣ ಅವರ ಗುಂಪಿನಿಂದಲೇ ಕಾರ್ಯಕರ್ತರೂ ಕೂಡ ಮುಂದೆ ಬರುವರು.

⇨ **ನ**ನ್ನ ದೃಷ್ಟಿಯಲ್ಲಿ ಒಂದು ಜನಾಂಗವು, ಸಂಪೂರ್ಣ ಬ್ರಹ್ಮಚರ್ಯದ ಆದರ್ಶವನ್ನು ಪಡೆಯುವುದಕ್ಕೆ ಮುಂಚೆ ವಿವಾಹದ ಪಾವಿತ್ರ್ಯ ಮತ್ತು ಅದು ವಿಚ್ಛೇದನದ ಸಾಧ್ಯತೆ ಇಲ್ಲದ್ದು ಎಂಬುದನ್ನು ಅರಿಯುವುದರ ಮೂಲಕ ಮಾತೃಸ್ಥಾನಕ್ಕೆ ಹೆಚ್ಚು ಗೌರವ ಕೊಡುವುದನ್ನು ಕಲಿಯಬೇಕು. ಆಜನ್ಮ ಬ್ರಹ್ಮಚರ್ಯವ್ರತವನ್ನು ಪಾಲಿಸುವ ಕೆಲವರಿಗೆ ಜನ್ಮವೀಯುವುದಕ್ಕಾಗಿ ಬಹುಪಾಲು ಮಂದಿಗೆ ಪವಿತ್ರವಾದ ಮದುವೆಯೆಂಬ ಸಂಸ್ಕಾರವು ಆವಶ್ಯಕವೆಂಬುದು ಗೊತ್ತಾಗಿದೆ.

⇨ **ಬು**ದ್ಧಿವಂತನಾದ ಮನುಷ್ಯನು ಯಾವ ಕೆಲಸವನ್ನೇ ಆಗಲಿ ತನ್ನ ಅಭಿರುಚಿಗೆ ತಕ್ಕಂತೆ ಪರಿವರ್ತಿಸಿಕೊಳ್ಳಬಲ್ಲ. ಯಾವ ಕೆಲಸವೂ ಕ್ಷುದ್ರವಲ್ಲ.

⇨ **ಈ** ಪ್ರಪಂಚದ ವಿದ್ಯಮಾನಗಳ ಉನ್ನತಿ ಎಂದಾದರೂ ಸಾಧ್ಯವಾದರೆ ಅದು ಸ್ಪರ್ಧೆಯಿಂದಲ್ಲ; ಆದರೆ ಮನಸ್ಸನ್ನು ನಿಯಮಕ್ಕೆ ಒಳಪಡಿಸುವುದರಿಂದ.

⇨ **ಸ**ಮಸ್ತ ಜ್ಞಾನರಾಶಿಯೂ ಮನಸ್ಸಿನಲ್ಲಿಯೇ ಇದೆ. ಜ್ಞಾನವು ಕಲ್ಲಿನಲ್ಲಿರುವುದನ್ನು ಅಥವಾ ಖಗೋಳಶಾಸ್ತ್ರವು ನಕ್ಷತ್ರಗಳಲ್ಲಿರುವುದನ್ನು ನೋಡಿದವರು ಯಾರು? ಅದೆಲ್ಲವೂ ಮಾನವನಲ್ಲಿಯೇ ಇದೆ.

⇨ **ಯಾ**ವ ವ್ಯಕ್ತಿಯೇ ಆಗಲಿ, ಜನಾಂಗವಾಗಲಿ ಇತರರನ್ನು ದ್ವೇಷಿಸಿ ಬಾಳಲಾರದು. ಎಂದು ಭಾರತೀಯರು ಮ್ಲೇಚ್ಛ ಎಂಬ ಪದವನ್ನು ಸೃಷ್ಟಿಸಿ ಇತರರೊಂದಿಗೆ ಸಂಪರ್ಕವನ್ನು ತ್ಯಜಿಸಿದರೂ ಅಂದಿನಿಂದಲೇ ಭಾರತಭಾಗ್ಯದೇವತೆ ಮಾಯವಾದಳು. ಆ ಭಾವನೆ ಮತ್ತೆ ಬಾರದಂತೆ ನೋಡಿಕೊಳ್ಳಿ. ವೇದಾಂತದ ವಿಷಯವಾಗಿ ಮಾತನಾಡುವುದು ಬಹಳ ಸುಲಭ. ಆದರೆ ಅದರ ಒಂದು ಸ್ವಲ್ಪವನ್ನಾದರೂ ಅನುಷ್ಠಾನಕ್ಕೆ ತರುವುದು ಎಷ್ಟು ಕಷ್ಟ!

⇨ **ಯಾ**ರು ತಮ್ಮ ಕಣ್ಣುಗಳನ್ನು ತೆರೆದಿರುವರೋ, ಪಾಶ್ಚಾತ್ಯ ಜನಾಂಗ ಹೇಗೆ ಕೆಲಸಮಾಡುತ್ತಿದೆ ಎಂದು ಯಾರಿಗೆ ಪರಿಚಯವಾಗಿದೆಯೋ, ಯಾರು ಮೇಧಾವಿಗಳೋ, ಅನ್ಯ ಜನಾಂಗಗಳನ್ನು ಚೆನ್ನಾಗಿ ವಿಮರ್ಶಿಸಿ ನೋಡಿರುವರೋ, ಅವರಿಗೆ ಹೇಗೆ ಪಾಶ್ಚಾತ್ಯರ ರೀತಿನೀತಿಗಳಲ್ಲಿ ಮತ್ತು ವಿಶ್ವಸಾಹಿತ್ಯದಲ್ಲಿ ಎಂದಿಗೂ ನಿಲ್ಲದೆ ನಿಧಾನವಾಗಿ ವಿಸ್ತರಿಸುತ್ತಿದೆ ಎಂಬುದು ಗೊತ್ತಾಗುವುದು.

⇨ **ಭಾ**ರತೀಯ ಭಾವನೆಯ ಒಂದು ವೈಶಿಷ್ಟ್ಯವೇ ಅದರ ಶಾಂತಿ ಮತ್ತು ಮೌನ.

—ಸ್ವಾಮಿ ವಿವೇಕಾನಂದ

## ಪ್ರಾರ್ಥನೆ

### ಬಟ್ಟಲು

ಮಗು, ನಿನ್ನ ಬಟ್ಟಲಿದೊ,
ಆದಿಯಿಂದಲು ಇದುವೆ ನಿನಗಾಗಿದೆ
ಜನ್ಮಜನ್ಮಾಂತರದಿ
ಭೂತದಾಳಗಳಲ್ಲಿ
ಎಡವುತಲಿ, ಕೆರಳುತಲಿ,
ನಿನ್ನ ಕಹಿ ಬಟ್ಟಲನು ನೀನೆ ತುಂಬಿರುವೆ!

ಈ ದಾರಿ ನಿನ್ನದಿದೊ—
ನೋವು-ಸಂಕಟವಿಲ್ಲಿ ಹಾಸಿ ಹಬ್ಬಿಹುದು;
ಬೆಂಡಾದ ನಿನಗಿಲ್ಲಿ ವಿಶ್ರಾಂತಿ ಸಿಗದವೊಲು
ಹಾದಿಯುದ್ದಕು ಕಲ್ಲ ನಾನೆ ಹರಡಿರುವೆ;
ನಿನ್ನ ನೇಹಿಗನ ಪಥ ಸುಗಮಗೊಳಿಸಿಹೆ ನಾನೆ,
ನಿನ್ನಂತೆಯೇ ಬರುವನವನು ನನ್ನೆದೆಗೆ!

ಇಂತಾದರೂ, ಮಗುವೆ, ನೀ ನಡೆವ ದಾರಿಯಿದು:
ನಿನ್ನ ಹೊಣೆಯಿದು, ನಿನಗೆ ಸೊಗವ ತರದಿರಬಹುದು;
—ಆದರಿದು ನಿನಗಾಗಿ ಮೀಸಲಿಹುದು.
ಈ ನನ್ನ ವಿಶ್ವದಲಿ ಎಲ್ಲದಕು ಸ್ಥಾನವನು
ಅಳೆದಳೆದು ಕೊಟ್ಟಿಹೆನು.
ಸ್ವೀಕರಿಸು ನೀನು.
ಇದನರಿಯಲಾರೆ ನೀ,
ನಿನ್ನ ಕಂಗಳ ಮುಚ್ಚಿ ಕಾಣು ನನ್ನನ್ನು!

ಮೂಲ ರಚನೆ : ಸ್ವಾಮಿ ವಿವೇಕಾನಂದ
ಕನ್ನಡಕ್ಕೆ : ಡಾ. ಎಚ್.ಎಸ್.ಮುರಳೀಧರ